ನೆನಪಿಗೆ ಬಂತು.

"ಎಷ್ಟು ನಿಜ ಅಂತ ಗೊತ್ತಿಲ್ಲ. ಚಿನ್ನಪ್ಪ ನನ್ಗೆ ಹೇಳಿದ್ದು. ದೇವನಗಿರಿಲಿ ಬಾಳೇಕಾಡ್ ಹೆಸರಿನ ಎಸ್ಟೇಟಲ್ಲಿ ಯಾರೋ ಏಡುಕೊಂಡಲು ಅನ್ನುವವನೊಬ್ಬ ಉಚಿತವಾಗಿ ಗುಂಡು ಕುಡಿಸ್ತಿದ್ದಾನಂತೆ!"

ಅದೇ ಆಸಾಮಿ! ಪ್ರಾಯಶಃ ರುದ್ರಮುನಿ ಕಾಣೆಯಾದ ಮೇಲೆ ಏಡುಕೊಂಡಲು ಕುಡಿಯಲು ಸಂಗಾತಿ ಕೋರಿ ಜಾಹೀರಾತು ನೀಡಿರಬೇಕು!!

"ಅವ್ನು ಕಾಣೆಯಾಗಿದ್ದಾನೆ ಅಂತ ಹೇಗೆ ಖಚಿತವಾಗಿ ಹೇಳ್ತೀರಿ?" ಕರಮಚಂದ ವಿಚಾರಿಸಿದ.

"ಕಳೆದ ಗುರುವಾರ ಅವ್ನು ಚಿನ್ನಪ್ಪನ ಬೈಕ್ ತೆಗೆದುಕೊಂಡು ಹೋದವನು ಮರುದಿನ ಬರಲಿಲ್ಲ. ಅವ್ನ ಮೊಬೈಲಿಗೆ ಕರೆ ಮಾಡಿದ್ರೆ, ಸ್ವಿಚ್ ಆಫ್ ಎಂಬ ಸಂದೇಶ ಬರುತ್ತಿತ್ತು. ಶುಕ್ರವಾರ ಸಂಜೆ ಅತನನ್ನು ಹುಡುಕಿಕೊಂಡು ಚಿನ್ನಪ್ಪ ಮತ್ತಿಬ್ಬರು ದೇವನಗಿರಿಗೆ ಹೋದ್ರು. ಏಡುಕೊಂಡಲು ಹತ್ರ ವಿಚಾರಿಸ್ದಾಗ ರುದ್ರಮುನಿ ಗುರುವಾರದಿಂದ ಬಂದಿಲ್ಲ ಅಂತ ಹೇಳಿದನಂತೆ. ಇನ್ನಷ್ಟು ಹುಡುಕಾಡಿದಾಗ, ದೇವನಗಿರಿಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಚಿನ್ನಪ್ಪನ ಬೈಕ್ ಪತ್ತೆಯಾಯ್ತು. ರುದ್ರಮುನಿ ಬೈಕ್ ತೆಗೆದುಕೊಂಡು ಅಲ್ಲಿಗೇಕೆ ಹೋದ? ಆಮೇಲೆ ಅವ್ನು ಹೇಗೆ ಕಾಣೆಯಾದ? ಅವ್ನು ಜೀವಂತ ಇದ್ದಾನೆಯೆ? ಈ ಪ್ರಶ್ನೆಗಳಿಗೆ ಉತ್ತರ ಬೇಕಾಗಿತ್ತು."

"ಕುಟ್ಟಯ್ಯ, ನೀವು ತಂದಿರೋ ಪ್ರಕರಣ ಅತ್ಯಂತ ಕುತೂಹಲಕರವಾಗಿದೆ ಅನ್ನೋದರಲ್ಲಿ ಅನುಮಾನವೇ ಇಲ್ಲ. ನೀವು ಪೊಲೀಸರಿಗೆ ದೂರು ನೀಡಿದ್ದೀರೊ?"

"ಇಲ್ಲ, ಕೊಡಬೇಕಿತ್ತೆ? ನನ್ಗೆ ಪೊಲೀಸ್ ತನಿಖೆಯಲ್ಲಿ ಹೆಚ್ಚಿನ ವಿಶ್ವಾಸವಿಲ್ಲ."

"ದೂರು ಕೊಡೋದು ನಿಮ್ಮ ಕರ್ತವ್ಯ. ಇಲ್ದೇ ಇದ್ರೆ ಮುಂದೆ ನಿಮ್ಗೆ ತೊಂದರೆಯಾಗಲೂಬಹುದು."

ಆಗ ಆತನ ಮೊಗದಲ್ಲಿ ಅವ್ಯಕ್ತ ಭೀತಿಯೊಂದನ್ನು ನಾನು ಕಂಡೆ. ಪೊಲೀಸ್ ಅಂದರೆ ಹೆಚ್ಚಿನವರಿಗೆ ಇನ್ನೂ ಭಯವಿದೆ!

"ನಿಮ್ಮ ಎಸ್ಟೇಟಿನಲ್ಲಿ ಎಷ್ಟು ಜನ ಕೆಲ್ಸ ಮಾಡ್ತಿದ್ದಾರೆ?" ನಾನು ವಿಚಾರಿಸಿದೆ.

"ಸುಮಾರು ಮುನ್ನೂರೈವತ್ತು ಮಂದಿ, ಮೇಲ್ವಿಚಾರಕರು, ಗುಮಾಸ್ತರು ಎಲ್ಲಾ ಸೇರಿ."

"ನಿಮ್ಗೆ ಎಲ್ಲಾ ಕೆಲಸಗಾರರ ಹೆಸರು, ಪರಿಚಯ ಇದೆಯೆ?"

"ಕೆಲಸಗಾರರು ಬರ್ತಾರೆ, ಹೋಗ್ತಾರೆ. ನನ್ಗೆ ಎಲ್ಲರ ಹೆಸರು ಗೊತ್ತಿಲ್ಲ. ನೋಡಿದ್ರೆ ಗುರುತಾಗುತ್ತೆ. ಮೇಲ್ವಿಚಾರಕರಿಗೆ ಅವರ ತಂಡದವರ ಪರಿಚಯ ಇರುತ್ತಷ್ಟೆ."

"ಕುಟ್ಟಯ್ಯ, ನಿಮ್ಮ ಪ್ರಕರಣವನ್ನು ನಾನು ಕೂಡಲೇ ಕೈಗೆತ್ತಿಕೊಳ್ಳುತ್ತೇನೆ. ನಾಳೆ ನಿಮ್ಮನ್ನ ಭೇಟಿಯಾಗುವೆ."

"ಓಹ್! ಖಂಡಿತಾ ಬನ್ನಿ. ನಿಮ್ಮ ಶುಲ್ಕವನ್ನು ಸಂಪೂರ್ಣವಾಗಿ ನಾನು ಪಾವತಿಸ್ತೇನೆ. ಇದು ನೋಡಿ ನನ್ನ ವಿಳಾಸ" ಹಾಗೆನ್ನುತ್ತಾ ತನ್ನ ವಿಸಿಟಿಂಗ್ ಕಾರ್ಡ್ ಮತ್ತು ಕೊಂಚ ಮುಂಗಡ ಹಣವನ್ನೂ ನೀಡಿ ನಮ್ಮ ಅತಿಥಿ ಹೊರಬಿದ್ದ. ಕೆಳಗಡೆ ಬಾಗಿಲು ಎಳೆದ ಸದ್ದು ಆತ ಹೋಗಿದ್ದನ್ನು ಸಾರಿತು. ಅವನು ಹೋದೊಡನೆ ನಾನು ಕರಮಚಂದನಲ್ಲಿ ನನ್ನ ಸಂಶಯ ತೋಡಿಕೊಂಡೆ, "ತನ್ನ ಎಲ್ಲಾ ಕೆಲಸಗಾರರ ಗುರುತು ಇಲ್ದೇ ಇದ್ರೂ, ರುದ್ರಮುನಿಯನ್ನು ವಿಶೇಷವಾಗಿ ಆತ ನೆನಪಿಟ್ಟುಕೊಂಡಿದ್ದು ಏಕೆ?"